
# ಪನ್ನೆಪ್ಪಲ

ಅದೇನು ಒಂಟಿ ತಾಳೆಯೊ ಎಲ ಎಲ
ಕೆಳಗಡೆ ಪನ್ನೆಪ್ಪಲವೂ ಗಲಗಲ
ರಾತ್ರಿ ಹಗಲುಗಳ ನಟ್ಟ ನಡುವೆ
ನಡು ವೇಳೆಗೆ ಘಮ್ಮೆನ್ನುವ ಮಲ್ಲಿಗೆ
ಚೆಂಡು ಮಲ್ಲಿಗೆ ಅಕ್ಕಚ್ಚು ಮಲ್ಲಿಗೆ
ಏನು ಎಲ್ಲಿಗೆ ಒಂದೂ ತಿಳಿಯದೆ

ಅಲ್ಲೊಬ್ಬ ಹುಡುಗ
ಹಳ್ಳಿಯ ಮುಗುದ
ಆಗಾಗ ಕಾಡುವ ಮೂಗಿನ ನೆಗಡಿ
ಉಬ್ಬಸ ಕೂಡ ಅದಕೆ ಜತೆಗೂಡಿ
ಅವನ ಹೆಸರೇ ನನ್ನ ಹೆಸರು
ಅವನನು ಕೂಗಿ ನನ್ನನು ಕರೆದು
ಮಾತಾಡಿಸುತಿದ್ದರು ಆ ಊರವರು

ಮುಟ್ಟಿದರೆ ಮುನಿವ ತೊಟ್ಟಂಬಾಡಿ
ಅದರಾಚಿನ ಕೇದಿಗೆ ಅಚಾನಕ ಮೂಡಿ
ಪಡುವಿಗೆ ಕಡಲು ಮೂಡಕೆ ಬೆಟ್ಟ
ತೆಂಗು ಕಂಗು ಬಾಳೆಯ ತೋಟ
ಅನಿಸುತಿತ್ತು ಅದೊಂದೇ ಲೋಕ

ತುಳು ಕನ್ನಡ ಮಲಯಾಳ
ಎಲ್ಲವ ಹಿಡಿಯುವ ಗಾಳಿಯ ಗಾಳ
ಕರೆದರೆ ಬಂದು ಉದುರಿಸದಿರುವುದೆ
ನನಗೊಂದಣ್ಣು ನಿನಗೊಂದಣ್ಣು
ಸೂರ್ಯದೇವರಿಂಗಿಪ್ಪತ್ತಣ್ಣು
ಇಪ್ಪತ್ತೇ ಅದು ಈವಾಗಲೂ?



**ಕೆ.ವಿ. ತಿರುಮಲೇಶ್**
ಆಧುನಿಕ ಕನ್ನಡ ಕಾವ್ಯಕ್ಕೆ ಹೊಸ ಸಂವೇದನೆ, ನುಡಿಗಟ್ಟನ್ನು ಕೊಟ್ಟ ಮಹತ್ವದ ಕವಿ. ಕತೆ, ಪ್ರಬಂಧ, ವಿಮರ್ಶೆ, ಅನುವಾದದ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತ ಬಂದಿದ್ದಾರೆ. ಕಾಸರಗೋಡಿನವರಾದ ಅವರು ಪ್ರಸ್ತುತ ಹೈದರಾಬಾದ್‌ನಲ್ಲಿ ನೆಲೆಸಿದ್ದಾರೆ.